ಮರಿಹಾಳ್ ಪೋಲೀಸ್ ಠಾಣೆಯನ್ನು ಸಾಂಬ್ರ ಪೋಲೀಸ್ ಠಾಣೆಗೆ ವರ್ಗಾಯಿಸಿರುವ ಬಗ್ಗೆ

೪೪೬ (೬೦೦) ಶ್ರೀ ಕೆ. ಸಿ. ಕೊಡಗೇಕರ ದೇಸಾಯಿ (ಹಿರೇಬಾಗೇವಾಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮರಿಹಾಳ್ ಪೋಲೀಸ್ ಠಾಣೆಯನ್ನು ಸಾಂಬ್ರ ಪೋಲೀಸ್ ಠಾಣೆಗೆ ವರ್ಗಾಯಿಸಿರುವುದು ನಿಜವೇ ?

ಆ) ಸದರಿ ಪೋಲೀಸ್ ಠಾಣೆಯನ್ನು ವರ್ಗಾಯಿಸಲುಕಾರಣ ?

ಇ) ಪೋಲೀಸ್ ಠಾಣೆಯನ್ನು ಆದರ ಮೂಲ ಸ್ಥಳದಲ್ಲಿ ತರಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಮರಿಹಾಳ್ ಪೋಲೀಸ್ ಠಾಣೆ ಕಟ್ಟಡದ ಚಾವಣಿಯು ಬಿರುಕು ಬಿಡಲು ಪ್ರಾರಂಭಿಸಿದ್ದು ಪೋಲೀಸ್ ಸಿಬ್ಬಂದಿ ವರ್ಗದವರ ಹಾಗೂ ಠಾಣೆಗೆ ಭೇಟಿ ನೀಡುವ ಸಾರ್ವಜನಿಕರ ಜೀವಕ್ಕೆ ಹಾನಿಯಾಗುವ ಅಪಾಯ ಪರಿಸ್ಥಿತಿ ಇದ್ದುದರಿಂದ ಸದರಿ ಠಾಣೆಯನ್ನು ತಕ್ಷಣ ಸ್ಥಳಾಂತರಿಸಲಾಯಿತು.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಮಾದಕ ಪಾನೀಯಗಳ ನಿಷೇಧ ಕುರಿತು

೪೪೭ (೭೪೧) ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸಿಗರೇಟು ಸೇದುವುದು ಹಾನಿಕರ ಎಂಬುದಾಗಿ ಸಿಗರೇಟು ಸೇದುವವರಿಗೆ ಎಚ್ಚರಿಕೆ ಕೊಟ್ಟಿರುವ ರೀತಿಯಲ್ಲಿಯೇ ಮಾದಕ ಪಾನೀಯಗಳು ಆರೋಗ್ಯಕ್ಕೆ ಹಾನಿಕರ ಎಂಬುದಾಗಿ ಏಕೆ ಪ್ರಚಾರ ಪಡಿಸಿಲ್ಲ ?

ಆ) ರಾಜ್ಯದ ಹೆದ್ದಾರಿಗಳಲ್ಲಿ ಯಾವುದೇ ರೀತಿಯ ಬಾರ್ ತೆಗೆಯಲು ನಿಷೇಧ ಇದ್ದರೂ ಇನ್ನೂ ಅವುಗಳನ್ನು ಸ್ಥಳಾಂತರಿಸದಿರಲು ಕಾರಣವೇನು ?

ಇ) ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಬಾರೊಳಗೆ ಪ್ರವೇಶ ನೀಡದಂತಿರಲು ಸರ್ಕಾರ ಯಾವ ರೀತಿ ಎಚ್ಚರಿಕೆ ವಹಿಸಿದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು).—

ಅ) ಸರ್ಕಾರವು ಪ್ರತಿಯೊಂದು ೧೦೦ ಎಂ.ಎಲ್. ಮತ್ತು ೫೦ ಎಂ.ಎಲ್. ಸಾರಾಯಿ ಸ್ಯಾಚೆಟ್‌ಗಳ ಮೇಲೆ ಮದ್ಯಪಾನ ಆರೋಗ್ಯಕ್ಕೆ ಹಾನಿಕರ ಎಂದು ಮುದ್ರಿಸುತ್ತಿದೆ.

ಆ) ಹೆದ್ದಾರಿಯಲ್ಲಿರುವ ಬಾರ್‌ನ ಸನ್ನದುದಾರರು ಉಚ್ಚ ನ್ಯಾಯಾಲಯಕ್ಕೆ ಮೊರೆ ಹೋಗಿರುತ್ತಾರೆ. ಉಚ್ಚ ನ್ಯಾಯಾಲಯವು ರಾಜ್ಯ ಹೆದ್ದಾರಿಗಳಲ್ಲಿರುವ ಬಾರ್‌ಗಳನ್ನು ಸ್ಥಳಾಂತರಿಸುವ ಬಗ್ಗೆ ತೀರ್ಮಾನ ಕೈಗೊಂಡು ಇವುಗಳನ್ನು ಸ್ಥಳಾಂತರಿಸಲು ಅಬಕಾರಿ ವರ್ಷದ ಅಂತ್ಯ ಅಂದರೆ ೩೦-೬-೯೪ರ ವರೆಗೆ ಸಮಯವನ್ನು ನೀಡಿರುತ್ತದೆ.

ಇ) ಬಾರ್‌ಗಳಲ್ಲಿ ೨೧ ವರ್ಷಕ್ಕಿಂತ ಕಡಿಮೆ ಇರುವವರಿಗೆ ಮದ್ಯವನ್ನು ಸರಬರಾಜು ಮಾಡಲು ಕರ್ನಾಟಕ ಅಬಕಾರಿ (ಸಾಮಾನ್ಯ ಷರತ್ತುಗಳು) ನಿಯಮಗಳಲ್ಲಿ ಅವಕಾಶವಿರುವುದಿಲ್ಲ.